**ದಿಃ 14.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ ಪ್ರಮಾಣೀಕರಿಸಿರುತ್ತಾರೆ.**

**ಮುಖ್ಯ ವಿಚಾರಣೆ ಶ್ರೀ.ಬಿ.ಎಂ.ಎಂ ವಕೀಲರಿಂದಃ ಅರ್ಜಿದಾರರ ಪರವಾಗಿಃ**

4) ಎಂ.ವಿ.ಸಿ 1892/2023 ಇದರಲ್ಲಿಯ ಅದೇಶ ಪುಟದ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು, ನಿ.ಪಿ-1 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀಮತಿ ವಾಯ್.ವಿ.ಡಿ ವಕೀಲರಿಂದಃ 2 ನೇ ಎದುರುದಾರರ ಪರವಾಗಿಃ**

5) ನಾನು ಮುಖ್ಯ ವಿಚಾರಣೆಗಾಗಿ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಬರೆದಿರುವಂತಹ ಎಲ್ಲ ಸಂಗತಿಗಳು ನನಗೆ ಗೊತ್ತಿರುತ್ತವೆ. ದಿನಾಂಕಃ 29.07.2025 ರಂದು ನನಗೆ ಆರೋಗ್ಯ ಸರಿ ಇಲ್ಲದ ಕಾರಣ ನಾನು ಚಿಕಿತ್ಸೆಗಾಗಿ ಮಂಗಳೂರಿನ ಎನ್ನಪೋಯಾ ಆಸ್ಪತ್ರೆಗೆ ಹೋಗಿದ್ದೇನು. ನನ್ನ ಬಲಗಾಲು ಬಾವು ಬಂದಿದ್ದರಿಂದ ಅದನ್ನು ತೋರಿಸಲು ನಾನು ಮಂಗಳೂರಿನ ಎನ್ನಪೋಯಾ ಆಸ್ಪತ್ರೆಗೆ ಹೋಗಿದ್ದೇನೆ. ನಾನು ದಿನಾಂಕಃ 29.07.2025 ರಂದು ನನ್ನ ಬಲಗಾಲು ಬಂದಿದ್ದರಿಂದ ಅದಕ್ಕೆ ಚಿಕಿತ್ಸೆ ಪಡೆಯಲು ಮಂಗಳೂರಿನ ಎನ್ನಪೋಯಾ ಆಸ್ಪತ್ರೆಗೆ ಹೋಗಿದ್ದರ ಕುರಿತಾಗಿ ನಾನು ಈ ಪ್ರಕರಣದಲ್ಲಿ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವದಿಲ್ಲ. ನಾನು ಈ ಪ್ರಕರಣದಲ್ಲಿ ಸಲ್ಲಿಸಿದ ಮುಖ್ಯ ಅರ್ಜಿಯಲ್ಲಿ ಎಂ.ವಿ.ಸಿ ನಂಬರಃ 1892/2023 ಈ ಪ್ರಕರಣವನ್ನು ಪುನರ್ ಸ್ಥಾಪಿಸಲು ಯಾವುದೇ ರೀತಿ

ಸಮಂಜಸವಾದ ಕಾರಣಗಳು ಕಂಡು ಬರದೇ ಇರುವದರಿಂದ ನನ್ನ ಮುಖ್ಯ ಅರ್ಜಿಯನ್ನು ಪರಿಗಣಿಸಲು ಆಗುವದಿಲ್ಲ ಅಂದರೆ ಸರಿಯಲ್ಲ. ದಿನಾಂಕಃ 29.07.2025 ರಂದು ನಾನು ನನಗೆ ಆದಂತಹ ಗಾಯಗಳಿಗೆ ಚಿಕಿತ್ಸೆ ಪಡೆಯಲು ಎಲ್ಲಿಯೂ ಸಹ ಹೋಗಿಲ್ಲ, ಆದ್ದರಿಂದ ನನ್ನ ಮುಖ್ಯ ಅರ್ಜಿಯಲ್ಲಿ ಬರೆದಂತಹ ಸಂಗತಿಗಳು ಮತ್ತು ನನ್ನ ಮುಖ್ಯ ವಿಚಾರಣೆ ಪರಮಾಣ ಪತ್ರದಲ್ಲಿ ಬರೆದಿರುವಂತಹ ಸಂಗತಿಗಳು ಸುಳ್ಳಾಗಿರುತ್ತವೆ ಅಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ,ಹಾವೇರಿ.